ರಸ್ತೆ ಕೆಲಸಗಳಿಗೆ ಶಾಸಕರಿಗೆ ಮೀಸಲ್ಪಟ್ಟ ಹಣದ ಬಗ್ಗೆ

2710 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದಿನ ಸರ್ಕಾರ ಪ್ರತಿಯೊಬ್ಬ ಶಾಸಕರ ಕ್ಷೇತ್ರಗಳಿಗೆ ರಸ್ತೆ ಕಾರ್ಯಗಳಿಗಾಗಿ ರೂ.12 ಲಕ್ಷ ಮೀಸಲಿಟ್ಟಿದು ನಿಜವೇ? ಹಾಗಿದ್ದಲ್ಲಿ ಈ ಸರ್ಕಾರ ಅದನ್ನು ಮುಂದುವರೆಸುವುದೇ?

ಆ) ಪ್ರತಿಯೊಬ್ಬ ಶಾಸಕರ ಕ್ಷೇತ್ರಕ್ಕೆ ಎಷ್ಟು ಹಣದ ಕಾರ್ಯ ಕೊಡಲಾಗುವುದು ಹಾಗೂ ಅದನ್ನು ಎಂದು ಕೊಡಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಹೌದು, ಮುಂದುವರೆಸುತ್ತಿದೆ.

ಆ) ಪ್ರತಿ ಒಂದು ಕ್ಷೇತ್ರಕ್ಕೆ ರು.12 ಲಕ್ಷ ಮಿತಿಗೊಳಪಟ್ಟ ಅಂದಾಜು 25 ಕೋಟಿ ರೂ.ಗಳ ಕಾಮಗಾರಿಗಳನ್ನು ನಿರ್ವಹಿಸಲು ಉದ್ದೇಶಿಸಿದ್ದು ಇದರಲ್ಲಿ 1990-91ನೇ ಸಾಲಿಗೆ ರೂ.5 ಕೋಟಿ ಹಣವನ್ನು ಬಿಡುಗಡೆ ಮಾಡಲಾಗಿದೆ ಮತ್ತು ಮುಂದುವರೆದ ಕಾಮಗಾರಿಗಳಿಗೆ 1991-92ನೇ ಸಾಲಿಗೆ ರೂ.17 ಕೋಟಿ ಅಗತ್ಯವಿದೆಯೆಂದು ಅಂದಾಜಿಸಲಾಗಿದ್ದು ಇದನ್ನು ಬಿಡುಗಡೆ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಪ್ರತಿ ಕ್ಷೇತ್ರಕ್ಕೆ ಅಗತ್ಯವಿರುವ ಕಾಮಗಾರಿಗಳು ಮತ್ತು ಅಗತ್ಯವಾದ ಅನುದಾನದ ಬಗ್ಗೆ ವಿವರವಾದ ಪ್ರಸ್ತಾವನೆಯು ಲೋಕೋಪಯೋಗಿ ಇಲಾಖೆಯ ಪರಿಶೀಲನೆಯಲ್ಲಿದೆ.

ಸ್ವಾತಂತ್ರ್ಯ ಯೋಧರ ಪೆನ್‌ಶನ್

2706 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸ್ವಾತಂತ್ರ್ಯ ಯೋಧರಿಗಾಗಿ ನೀಡುವ ಮಾಸಾಶನ ಕೇಳಿಬಂದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು?

ಆ) ಇವರಿಗೆ ಮಾಸಾಶನ ಮಂಜೂರು ಮಾಡಲು ತಡವಾಗಿರುವುದಕ್ಕೆ ಕಾರಣವೇನು ಹಾಗೂ ಎಂದು ಇವರಿಗೆ ಹಣ ಮಂಜೂರು ಮಾಡಲಾಗುವುದು.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಕರ್ನಾಟಕ ರಾಜ್ಯದಲ್ಲಿ ಸ್ವಾತಂತ್ರ್ಯ ಹೋರಾಟ ಗಾರರಿಗೆ ಪಿಂಚಣಿ ನೀಡುವ ಯೋಜನೆಯನ್ನು 1969ನೇ ಸಾಲಿನಿಂದ ಜಾರಿಗೆ ತಂದ ದಿನದಿಂದ ಇಲ್ಲಿಯವರಗೆ ಸುಮಾರು 32,402 ಮಂದಿ ಸದರಿ ಪಿಂಚಣಿ ಕೋರಿ ಅರ್ಜಿ ಸಲ್ಲಿಸಿದ್ದಾರೆ.

ಆ) 19,753 ಅರ್ಜಿಗಳು ಮಂಜೂರಾಗಿವೆ. 10,600 ಅರ್ಜಿಗಳು ತಿರಸ್ಕೃತವಾಗಿವೆ. 2,000 ಅರ್ಜಿಗಳು ಬಾಕಿ ಇವೆ.

ಇವುಗಳಲ್ಲಿ ಕೆಲವು ನಿಗದಿತ ದಿನಾಂಕವಾದ 31-12-82ರ ನಂತರ ಬಂದಿವೆ. ಮತ್ತೆ ಕೆಲವು ಅರ್ಜಿಗಳಿಗೆ ಅರ್ಜಿದಾರರು ಪೂರ್ಣ ಮಾಹಿತಿಗಳನ್ನು ಒದಗಿಸಿರುವುದಿಲ್ಲ. ಅದುದರಿಂದ ಬಾಕಿ ಇವೆ. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲು ಇತ್ತೀಚೆಗೆ ನಿರ್ಧರಿಸಿದ್ದು ಇವುಗಳನ್ನು ಪರಿಶೀಲಿಸಲು ಒಂದು ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ಸಲಹೆಯ ಮೇರೆಗೆ ಈ ಅರ್ಜಿಗಳನ್ನು ಶೀಘ್ರವಾಗಿ ಇತ್ಯರ್ಥ ಮಾಡಲಾಗುವುದು. ಪೂರ್ಣ ಮಾಹಿತಿ ಇಲ್ಲದ ಅರ್ಜಿಗಳನ್ನು ಅರ್ಜಿದಾರರು ಮಾಹಿತಿ ಒದಗಿಸಿದಲ್ಲಿ ಪರಿಶೀಲಿಸಲಾಗುವುದು.